**ಸಾಕ್ಷಿಗೆ ದಿನಾಂಕಃ 12.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ.ಎಂ. ವಕೀಲರಿಂದಃ**

ಆರೋಪಿಯು ಸಹಿ ಮಾಡಿರುವುದನ್ನು ನಾನು ನೋಡಿರುತ್ತೇನೆ. ಆರೋಪಿಯು ಸಹಿ ಮಾಡುವುದನ್ನು ನೋಡದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ರವಿಕುಮಾರ್ ಎನ್ನುವವರಿಗೆ ನೀಡಿದ ಚೆಕ್ ನ್ನು ನಾನು ನನ್ನ ಹೆಸರನ್ನು ಬರೆದು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ರೂ.2.50 ಲಕ್ಷ ಹಣ ಇದ್ದ ಬಗ್ಗೆ ದಾಖಲೆಯನ್ನು ನೀಡಿರುತ್ತೇನೆ. ನಮ್ಮ ತಂದೆಗೆ ಅಪಘಾತದ ಪರಿಹಾರದ ಮೊತ್ತ ರೂ.9.25 ಲಕ್ಷ ಬಂದಿರುತ್ತದೆ. ಈ ಸಂಬಂಧ ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ರವಿಕುಮಾರ್ ರವರಿಗೆ ನೀಡಿದ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**